ಇ) ಈ ಸಮುದಾಯ ಆರೋಗ್ಯ ಕೇಂದ್ರದ ನಿರ್ವಹಣೆಗೆ ಯೋಜನಾ ವರದಿಯಂತೆ ಅಗತ್ಯವಿರುವ ಎಲ್ಲಾ ವಿಭಾಗಗಳನ್ನು ತೆರೆಯಲಾಗಿದೆ.

ಈ ಆಸ್ಪತ್ರೆಗೆ ಅಗತ್ಯವಿರುವ ೮೨೯ ಚ.ಮೀ. ವಿಸ್ತೀರ್ಣದಲ್ಲಿ ಹೊಸ ಕಟ್ಟಡ ನಿರ್ಮಿಸಿ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಲಾಗಿದೆ. ೩೮ ಹಾಸಿಗೆಗಳ ಹೊಸ ವಾರ್ಡ್. ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿ. ಕ್ಷ-ಕಿರಣ ಕೊಠಡಿ, ಅಡುಗೆ ಕೋಣೆ, ಗ್ಯಾರೇಜ್, ತುರ್ತು ಚಿಕಿತ್ಸಾ ವಿಭಾಗ ಹಾಗೂ ರ್ಯಾಂಪ್ ಒದಗಿಸಿದೆ. ಇದರ ಜೊತೆಗೆ ಸಮರ್ಪಕ ನೀರಿನ ಸೌಲಭ್ಯ ಒದಗಿಸಲು ಓವರ್‌ಹೆಡ್ ಟ್ಯಾಂಕ್. ಸಂಪ್ ಟ್ಯಾಂಕ್ ನಿರ್ಮಿಸಲಾಗಿದೆ. ಸಮರ್ಪಕ ವಿದ್ಯುತ್ ಸೌಲಭ್ಯ ಒದಗಿಸಲು ಟ್ರಾನ್ಸ್‌ಫಾರ್ಮರ್ ಸಬ್-ಸ್ಟೇಷನ್ ಮತ್ತು ಡಿ.ಜಿ. ರೂಮ್ ನಿರ್ಮಿಸಲಾಗಿದೆ.

ಅನುದಾನಿತ ಪದವಿಪೂರ್ವ ಕಾಲೇಜುಗಳ ಹೆಚ್ಚುವರಿ ವಿಷಯ ವಿಭಾಗಗಳ ಉಪನ್ಯಾಸಕರಿಗೆ ಏಕಕಾಲದಲ್ಲಿ ವೇತನ ಬಿಡುಗಡೆ.

೧೩೬೯(೧೭೮೦)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಅನುದಾನಿತ ಪದವಿ ಪೂರ್ವ ಕಾಲೇಜುಗಳ ಹೆಚ್ಚುವರಿ ವಿಷಯ ವಿಭಾಗಗಳಲ್ಲಿ ಅನುಮೋದನೆಗೊಂಡ ಅರ್ಹ ಉಪನ್ಯಾಸಕರು ಶೇ.೩ರ ವೇತನ ಮಿತಿಯ ಅಡಿಯಲ್ಲಿ ವೇತನಕ್ಕೆ ಕಾಯುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ ೧೪೬ ಅರ್ಹ ಉಪನ್ಯಾಸಕರ ವೇತನವನ್ನು ಏಕ ಕಾಲದಲ್ಲಿ ಬಿಡುಗಡೆ ಮಾಡಲು ಇರುವ ಅಡೆತಡೆಗಳೇನು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

೧) ಹೌದು.

೨) ಸಾಕಷ್ಟು ಸಂಪನ್ಮೂಲಗಳ ಕೊರತೆಯಿಂದ ಉಳಿದಿರುವ ೧೪೬ ಹುದ್ದೆಗಳನ್ನು ಏಕಕಾಲದಲ್ಲಿ ಅನುದಾನಕ್ಕೆ ಒಳಪಡಿಸಲು ಸಾಧ್ಯವಿಲ್ಲ.